



ಶಾತವಾಹನರು, ಚಾಲುಕ್ಯರು, ರಾಷ್ಟ್ರಕೂಟರು, ಯಾದವರು, ಬಹಮನಿ ಸುಲ್ತಾನರು, ನಿಜಾಮರು, ಮೊಘಲರು ಮತ್ತು ಮರಾಠರು ಬೇರೇ –ಬೇರೆ ಕಾಲದಲ್ಲಿ ಈ ಕೋಟೆಯನ್ನು ಆಕ್ರಮಿಸಿ ಆಳ್ವಿಕೆ ನಡೆಸಿದ್ದರೆಂದು ಇತಿಹಾಸದಲ್ಲಿ ದಾಖಲಾಗಿದೆ. ಕ್ರಿ.ಶ.1648 ರಲ್ಲಿ ಶಿವಾಜಿ ಮಹಾರಾಜ ಇದನ್ನು ಆಕ್ರಮಿಸಿಕೊಂಡಿದ್ದು, ಕ್ರಿ.ಶ.1665ರಲ್ಲಿ ಮೊಘಲ್ ದೊರೆಗಳ ಪಾಲಾಗಿತ್ತು. ಮತ್ತೆ 1670ರಲ್ಲಿ ಶಿವಾಜಿ ಮಹಾರಾಜ ಮತ್ತೆ ಕೋಟೆಯನ್ನು ವಶಕ್ಕೆ ಪಡೆದುಕೊಂಡು ತನ್ನ ಸಂಪತ್ತನ್ನು ಕೂಡಿಡುವ ಸ್ಥಳವನ್ನಾಗಿಸಿಕೊಂಡಿದ್ದ. ಸೂರತ್ ನಿಂದ ಲೂಟಿ ಮಾಡಿ ತಂದ ಸಂಪತ್ತನ್ನು ಇಲ್ಲಿ ಸಂಗ್ರಹಿಸಿ ಇಡಲಾಗುತ್ತಿತ್ತು ಎನ್ನುವುದೂ ಇತಿಹಾಸದಲ್ಲಿ ದಾಖಲಾಗಿದೆ.

ಮುಂದೆ ಪೇಶ್ವೆಗಳ ಆಡಳಿತದ ಅವಧಿಯಲ್ಲಿ ನಾನಾ ಫಡ್ನವೀಸ್ ಉಳಿದುಕೊಳ್ಳುವುದಕ್ಕೆ ಈ ಕೋಟೆಯನ್ನು ಬಳಸುತ್ತಿದ್ದ. ಆ ಕಾಲದಲ್ಲಿಯೇ ಆತ ಇಲ್ಲಿ ಷಟ್ಕೋನಾಕೃತಿಯ ಬಾವಿ, ಆನೆಗಳಿಗೆ ಮೈ ತೊಳೆಯುವ ನೀರಿನ ಹೊಂಡ, ಕುದುರೆ ಲಾಯ ಮುಂತಾದವುಗಳನ್ನು ನಿರ್ಮಿಸಿದ.



ಟ್ರೆಕ್ಕಿಂಗ್ ಉತ್ಸಾಹಿಗಳಿಗೆ ಲೋಹಾಗಢ ನೆಚ್ಚಿನ ತಾಣ. ಮಾಲ್ವಲಿ ಈ ಕೋಟೆಗೆ ಹತ್ತಿರದ ರೈಲ್ವೇ ಸ್ಟೇಷನ್. ಹತ್ತಿರದ 'ಲೋಹಾಗಡವಡಿ' ಎಂಬ ಹಳ್ಳಿಯಿಂದ ಲೋಹಾಗಢ ಏರಲು ನಾಲ್ಕು ದ್ವಾರಗಳಿವೆ. ಸುಮಾರು 400 ಮೆಟ್ಟಿಲುಗಳನ್ನು ಏರಿ ಕೋಟೆಯ ಮೇಲ್ಭಾಗಕ್ಕೆ ಬಂದರೆ ಅಲ್ಲಿ 3400 ಅಡಿಗಳಷ್ಟು ವಿಸ್ತೀರ್ಣದ ಪ್ರದೇಶ ನಿಮಗಾಗಿ ಕಾದಿದೆ. ಕೋಟೆಯ ಮೆಟ್ಟಿಲುಗಳನ್ನು ಅರ್ಧ ಗಂಟೆಯಲ್ಲಿ ಏರಬಹುದು. ಆದರೆ ಮೆಟ್ಟಿಲುಗಳನ್ನು ಹತ್ತುತ್ತಾ ಮೇಲೆ ಹೋಗುತ್ತಿರುವಂತೆ ನಿಮ್ಮ ಸುತ್ತಲಿನ ಪರಿಸರ ನಿಮ್ಮನ್ನು ನಿಂತು ಆಸ್ವಾದಿಸಲು ಒತ್ತಾಯಿಸುತ್ತದೆ. ಹಾಗೆ ನಿಂತೂ ಪ್ರಕೃತಿಯ ಮೋಹಕತೆಯನ್ನು ಸವಿಯುತ್ತಾ ಮಲಕ್ಕೇರಲು ಒಂದು ಗಂಟೆಯಾದರೂ ಹಿಡಿಯುತ್ತದೆ.



ಟ್ರೆಕಿಂಗ್ ಉತ್ಸಾಹಿಗಳು ಲೋಹಾಗಢ ತಲುಪಲು ಸಾಮಾನ್ಯವಾಗಿ ಎರಡೂ ದಾರಿಗಳನ್ನು ಬಳಸುತ್ತಾರೆ. ಲೋನಾವಾಲದಿಂದ ಲೋಕಲ್ ಟ್ರೈನ್ ಹತ್ತಿದರೆ ಮಾಲ್ವಲಿ ಗ್ರಾಮ ಸಿಗುತ್ತದೆ. ಅಲ್ಲಿಂದ ಇನ್ನೊಂದು ಲೋಕಲ್ ಟ್ರೈನ್ ಹತ್ತಿ 2 ಕಿ.ಮೀ ದೂರದ ಭಾಜಾ ಹಳ್ಳಿ ತಲುಪಬಹುದು. ಈ ಹಳ್ಳಿಯಲ್ಲಿ ಭಾಜಾ ಗುಹೆಗೆ ತೆರಳುವ ದಾರಿ ಮತ್ತು ಲೋಹಾಗಡವಡಿ ಹಳ್ಳಿಗೆ ಹೋಗುವ ದಾರಿಗಳು ಕವಲೊಡೆಯುತ್ತವೆ. ಮಾಲ್ವಲಿ ಗ್ರಾಮದಿಂದ ಭಾಜಾ ಗುಹೆವರೆಗೆ ಟ್ರೆಕಿಂಗ್ ನಡೆಸುವವರದ್ದೂ ದೊಡ್ಡ ದಂಡು ಕಾಣಸಿಗುತ್ತದೆ.